Teacher Kannada Monthly

# ಟೀಚರ್

₹45

ಸಂಪುಟ ೨೪ | ಸಂಚಿಕೆ ೯ ಅಗಸ್ಟ್೨೦೨೫ | ಪುಟಗಳು ೪೪
Volume 24 | Issue 9 |September 2025 | Pages 44

teacherpatrike

**ಹರೆಯದ ಹುಡುಗಿ ಹೀಗೇಕೆ?**
ಡಾ. ಎಚ್ ಎಸ್ ಅನುಪಮಾ

**ಆತ್ಮಹತ್ಯೆಗಳನ್ನು ತಡೆಯಬಹುದು**
ಡಾ. ಪಿ.ವಿ ಭಂಡಾರಿ

**ಮಸ್ಜಿದುನ್ನಬವಿಯ ಸಿಂಹಾಸನ**
ಮುಸ್ತಾಕ್ ಹೆನ್ನಾಬೈಲ್

**ದೃಶ್ಯಕಾವ್ಯ: ಸನ್ನೆ ನುಡಿ**
ಪ್ರೊ. ಅಬ್ದುಲ್ ರೆಹಮಾನ್ ಪಾಷಾ

**ಗ್ರಹಣ ಕಾಲದ ಪ್ರಶ್ನೆಗಳು**
ಪ್ರೊ. ಕಮಲ್ ಲೊಡಾಯ

**ಬಂಜರಾಗುತ್ತಿರುವ ಮಂಜು ಹೊಳೆಗಳು**
ಕೆ.ಎಸ್ ರವಿಕುಮಾರ್

**ಬಲುದೂರದ ಅತಿಥಿ: ಪಟ್ಟೆತಲೆ ಹೆಬ್ಬಾತು**
ಈರಣ್ಣ ಬೆಂಗಾಲಿ



## ಈ ಸಂಚಿಕೆಯಲ್ಲಿ

ವೇದಾ ಆಠವಳೆ
ಶ್ವೇತಾ ಕೊಟಗಿ
ಸುಶೀಲಾ ಕೆಂಚನೂರು
ಗುಂಡೂರಾವ್ ದೇಸಾಯಿ
ಸಚಿನ್ ಹಿರೇಮಠ್
ಶೈಲಾ ಬಡಿಗೇರ
ಸೋಮು ಕುದರಿಹಾಳ
ರವೀಂದ್ರ ರುದ್ರವಾಡಿ
ಡಾ. ಶ್ರೀದೇವಿ ಕರ್ಜಗಿ
ಕ್ಷಮಾ ವಿ ಭಾನುಪ್ರಕಾಶ್
ವಿದ್ಯಾ ಹಾಲಬಾವಿ
ರಾಜೂ ಭೂಶೆಟ್ಟಿ
ಅನುಷಾ ಶರ್ಮಾ

ಶಿಕ್ಷಕ-ಶಿಕ್ಷಕಿಯರೆಲ್ಲರಿಗೂ ಶುಭಾಶಯಗಳು

# ಗುರುವೆಂಬ ಮುಂಡಾಸನ್ನು ಕಳಚಿಟ್ಟು...



ಉತ್ತರೋತ್ತರ

# ಗುರುವೆಂಬ ಮುಂಡಾಸನ್ನು ಕಳಚಿಟ್ಟು...

ಗಾರೆಯವನೊಬ್ಬ ಸಂಜೆ ತನ್ನ ತಾಪೆ ತೊಳೆದು, ಚೀಲ ಹೆಗಲಿಗೇರಿಸಿದನೆಂದರೆ, ಅದುವರೆಗೂ ತನ್ನ ಹಣೆಯ ಮೇಲೆ ಬರೆದಂತಿದ್ದ ಗಾರೆಯವನೆಂಬ ಬೋರ್ಡು ಕಳಚಿಟ್ಟು ಹೊರಟುಬಿಡುತ್ತಾನೆ. ಅಂಗಡಿಗೆ ಹೊರಟಾಗ ನಿನ್ನೆಯ ಕಡ ಬಾಕಿ ಇಟ್ಟಿರುವ ಸಾಲಗಾರನಾಗುತ್ತಾನೆ. ಮನೆಯಲ್ಲಿ ಕಾದಿರುವ ಪುಟ್ಟ ಮಗುವಿಗೆ ಪೆಪ್ಪರಮಿಂಟು ಹಿಡಿದು ಅಪ್ಪನಾಗುತ್ತಾನೆ, ಒಬ್ಬ ಬಡಗಿಯಿರಲಿ, ಪೈಪು ಜೋಡಿಸುವ ಪ್ಲಂಬರನಿರಲಿ, ಇಸ್ತ್ರಿಯ ಅಗಸನಿರಲಿ ಎಲ್ಲರೂ ಹಾಗೆಯೇ!

ಶಿಕ್ಷಕಿ ಹಾಗಲ್ಲ.

ಗುರುವೆಂಬ ಮುಂಡಾಸು ಎಲ್ಲ ಕಡೆಯೂ ಹೊತ್ತುಕೊಂಡು ಓಡಾಡಬೇಕಾದ ಹೊರೆ. ಈ ಹೊರೆಯಲ್ಲಿ ಸ್ವಲ್ಪ ಭಾಗವನ್ನು ಸಮಾಜವೇ ಹೊರಿಸಿದ್ದು, ಇನ್ನಷ್ಟನ್ನು ಹೆಚ್ಚುವರಿ ಕೆಲಸವಾಗಿ ಉದ್ಯೋಗದಾತರೇ ನೀಡಿದ್ದು, ಮತ್ತೆಷ್ಟೋ ಭಾಗವನ್ನು ಶಿಕ್ಷಕಿ–ಶಿಕ್ಷಕರೇ ತಮ್ಮ ಮೇಲೆ ಆಪಾದಿಸಿಕೊಂಡ ಹೊರೆ.

ಯಾವುದೋ ಕಾಲದಲ್ಲಿ ಶಿಕ್ಷಕನಿಗೆ ನೀಡುತ್ತಿದ್ದ ಗೌರವವನ್ನು ನೆನಪಿಸಿಕೊಂಡು ಸಮಾಜವು ಒದ್ದಾಡುತ್ತದೆ. ಅಕ್ಷರ ಬಲ್ಲವರು ಊರಲ್ಲಿ ಒಬ್ಬರೋ ಇಬ್ಬರೋ ಇದ್ದ ಕಾಲದಲ್ಲಿ ಪಹಣಿ ಪತ್ರದಿಂದ ಹಿಡಿದು ಕೋರ್ಟು ನೋಟೀಸಿನವರೆಗೆ ಅಕ್ಷರದಲ್ಲಿ ಬಂದ ಸಂದೇಶಗಳೆಲ್ಲ ಗುರುವಿನ ಗಮನಕ್ಕೆ ಬಂದೇ ಹೋಗಬೇಕಿತ್ತು. ಇದು ಓದಬಲ್ಲವನ ಜವಾಬ್ದಾರಿಯನ್ನೂ, ಆತನ ಅಥವಾ ಆಕೆಯ ಮೇಲಿರುವ ವಿಶ್ವಾಸವನ್ನೂ ಹೆಚ್ಚಿಸುವುದರ ಜೊತೆಗೆ ಓದಿನ ಅಹಂಕಾರವನ್ನೂ ಹೆಚ್ಚಿಸಿತು. ತಮಗೆ ತಾವೇ ಕೋಡುಗಳನ್ನು ಮೂಡಿಸಿಕೊಂಡು ತಮ್ಮದಲ್ಲದ ಬಿಂಬವನ್ನು ತಮ್ಮೆದುರಿನ ಕನ್ನಡಿಯಲ್ಲಿ ಕಾಣುವುದು ಆರಂಭವಾಯಿತು.

ಶಿಕ್ಷಕಿ ಅಥವಾ ಶಿಕ್ಷಕ ಎಂಬುದೊಂದು ವೃತ್ತಿ ಮಾತ್ರ. ಆದುದರಿಂದ, ವೃತ್ತಿಪರನಾಗಿರುವುದು ಬಿಟ್ಟರೆ ಬೇರೆ ದಾರಿಯಿಲ್ಲ. ಗಾರೆಯವನು ಗೋಡೆಯ ಮೇಲ್ಮೈ ಸಪಾಟು ಮಾಡಲು ಬಳಸುತ್ತಿದ್ದ ಕಟ್ಟಿಗೆಯ ರೀಪನ್ನು ಬಿಸಾಡಿ ಅಲ್ಯೂಮೀನಿಯಂ ಪಟ್ಟಿಯನ್ನು ಹಿಡಿದುಕೊಂಡಿದ್ದಾನೆ. ಕ್ಷೌರಕ್ಕೂ ಮೊದಲು ಮುಖದ ಚರ್ಮವನ್ನು ಮೆತ್ತಗೆ ಮಾಡಿಕೊಳ್ಳಲು ಈಗಲೂ ಸ್ನಾನದ ಸೋಪನ್ನೇ ಬಳಸುವುದಿಲ್ಲ. ಹೊಸ ಸೌಕರ್ಯಗಳು, ಹೊಸ ಚಿಂತನೆಗಳು ಎಲ್ಲ ವೃತ್ತಿಗಳನ್ನೂ ಪ್ರಭಾವಿಸಿವೆ. ಇನ್ನಷ್ಟು ದಕ್ಷತೆಯಿಂದ ಕೆಲಸ ಮಾಡಲು ಸಹಾಯ ಮಾಡಿವೆ. ಕಲಿಯುವುದು ಎಲ್ಲ ಜೀವಿಗಳಲ್ಲಿ ಕಂಡುಬರುವ ಸಹಜ ಕ್ರಿಯೆ. ಊಟವನ್ನು ದಕ್ಕಿಸಿಕೊಳ್ಳಲು, ಶತೃವಿನಿಂದ ತಪ್ಪಿಸಿಕೊಳ್ಳಲು, ಸಂಗಾತಿಯನ್ನು ಒಲಿಸಿಕೊಳ್ಳಲು ಹೀಗೆ, ಮೂಲ ಆಕಾಂಕ್ಷೆಗಳನ್ನು ಸಾಧಿಸಲು ಎಲ್ಲ ಜೀವಿಗಳೂ ಕಲಿಯುತ್ತವೆ. ಮನುಷ್ಯನ ಕಲಿವು ಇವುಗಳಿಗಿಂತ ಭಿನ್ನ. ಕಲಿಸುವವರು, ಕಲಿಯುವ ಸ್ಥಳ, ಕಲಿಯುವ ಗುರಿ ಇದೆಲ್ಲ ಬೇಕು. ಆದರೆ, ಕಲಿಯುವುದು ತೀರಾ ವೈಯಕ್ತಿಕ. ಕಲಿಕೆದಾರಳಿಗೆ ಕಲಿಯುವುದನ್ನು ಕಲಿಸುವುದಷ್ಟೇ (ಲರ್ನಿಂಗ್ ಟು ಲರ್ನ್) ಶಿಕ್ಷಕಿ ಅಥವಾ ಶಿಕ್ಷಕನ 'ಕೆಲಸ'. ಇದರಾಚೆ ಆ ಶಿಕ್ಷಕಿ ಅಥವಾ ಶಿಕ್ಷಕ ಎಲ್ಲರಂತೆ ಇದೇ ಜಗದ ಮನುಷ್ಯರು.

ಮಗುವಿಗೆ ನಾಯಿಯನ್ನು ಬೆಕ್ಕು ಎಂದು ನಂಬಿಸಲು ಯಾವ ಶಿಕ್ಷಕರಿಂದಲೂ ಸಾಧ್ಯವಿಲ್ಲ. ತರಗತಿ ಕೋಣೆಯೆಂಬುದು ಹೊರಜಗತ್ತಿನಿಂದ ಪ್ರತ್ಯೇಕವಾದ ಸ್ಥಳವಲ್ಲ, ಮಗುವಿನ ಮೇಲೆ ಕೇವಲ ಶಿಕ್ಷಕರ ಪ್ರಭಾವಷ್ಟೇ ಇರುವುದಿಲ್ಲ, ಇರಬಾರದು ಕೂಡಾ. ಮಗು ತನ್ನ ಸುತ್ತಲ ಜಗತ್ತಿನಿಂದ ಒಂದೊಂದೇ ಕಡ್ಡಿಯನ್ನು ಹೆಕ್ಕಿಕೊಳ್ಳುತ್ತಾ ಒಂದೊಂದೇ ಕಲ್ಲನ್ನು ಮಗಚಿಡುತ್ತಾ ಜಗದ ಬೆರಗನ್ನು ತನ್ನ ಸ್ಮೃತಿಕೋಶಗಳಲ್ಲಿ ತುಂಬಿಕೊಳ್ಳುತ್ತಿರುವಾಗ, ಅನುಭವವಾಗಿ ಸ್ವಂತಗೊಳಿಸುತ್ತಿರುವಾಗ ಶಿಕ್ಷಕನ ಪಾತ್ರ ಎಂತದ್ದು? –ಕಲಿಯುವ ಪರಿಸರವನ್ನು ವಿನ್ಯಾಸಗೊಳಿಸುವುದೇ ಅಥವಾ ಕಲಿಯುವ ಪ್ರೇರಣೆಯನ್ನು ಒದಗಿಸುವುದೇ? ಹಾಗಾದರೆ, ಕಲಿಸುವುದು ಎಂದರೇನು? ಕಲಿಯುವ ಕ್ರಿಯೆಯ ಕುರಿತು ಹಿಂದಿನ ತಲೆಮಾರಿಗೂ ಇಂದಿನ ತಲೆಮಾರಿಗೂ ಇರುವ ಗ್ರಹಿಕೆ ಒಂದೇ ಆಗಿದೆಯೇ?

ನಾವೀಗ ಕಲಿಕೆಯ ಕುರಿತಾದ ಸಾಮಾಜಿಕ ಗ್ರಹಿಕೆಯು ತೀವ್ರವಾಗಿ ಬದಲಾಗುತ್ತಿರುವ ಸಂದರ್ಭದಲ್ಲಿದ್ದೇವೆ. ಕೃತಕ ಬುದ್ಧಿಮತ್ತೆಯು ನಮ್ಮ ಗ್ರಹಿಕೆಯನ್ನು ಮರುರೂಪಿಸುತ್ತಿರುವ ಕಾಲವಿದು. ಗಣಿತವನ್ನು ಪುಟ್ಟ ಪುಟ್ಟ ಗುರಿ ತುಣುಕುಗಳಾಗಿ ವಿಂಗಡಿಸಿ ಪ್ರತಿ ಮಗುವೂ ಅದರದೇ ವೇಗದಲ್ಲಿ ಕಲಿಯಲು ಕಲಿಕೆಯ ಸನ್ನಿವೇಶಗಳನ್ನು ಕೃತಕ ಬುದ್ಧಿಮತ್ತೆಯು ರೂಪಿಸಬಲ್ಲದು. ಅಲ್ಲಿ ಶಿಕ್ಷಕ ಅಥವಾ ಶಿಕ್ಷಕಿಯ ಪಾತ್ರ ಎಂತದ್ದಿರಬಹುದು? ಭಾಷೆಯನ್ನು ತೀರಾ ಖಾಸಗಿಯಾಗಿ ಕಲಿಯಲು ಪ್ರತಿ ಮಗುವಿಗೂ ಒಡನಾಟದ ಅನುಭವವನ್ನು ನೀಡಲು ಕೃತಕ ಬುದ್ಧಿಮತ್ತೆಗೆ ಸಾಧ್ಯ. ಈಜಿನಿಂದ ವಿಮಾನ ಚಾಲನೆಯವರೆಗೆ ಅಂಕಗಣಿತದಿಂದ ಕಲನವಿಜ್ಞಾನದವರೆಗೆ ಎಲ್ಲವನ್ನೂ ಇನ್ನೊಬ್ಬರ ಸಹಾಯವಿಲ್ಲದೆ ಕಲಿಯಲು ಅದು ಪರಿಸರವನ್ನು ರೂಪಿಸಬಲ್ಲದು. ಈ ಸಂದರ್ಭದಲ್ಲಿ ಗುರು ಮತ್ತು ಶಿಷ್ಯ ಎಂಬ ಪರಸ್ಪರ ಒಡನಾಟದ ಸಂಬಂಧಗಳು ಮರು ಅರ್ಥೈಸಲ್ಪಡುವುದು ಸ್ವಾಭಾವಿಕ.

ವೈದ್ಯರನ್ನು, ಎಂಜಿನಿಯರರನ್ನೂ, ವಿಜ್ಞಾನಿಗಳನ್ನೂ, ಕ್ರೀಡಾಪಟುಗಳನ್ನೂ ಸೇರಿ ಎಲ್ಲ ವೃತ್ತಿ ಕೌಶಲಗಳನ್ನೂ ಕಲಾಪ್ರಾವೀಣ್ಯವನ್ನೂ ಯಂತ್ರ ಕಲಿಕೆಯ ಮೂಲಕವೇ ಕಲಿಯಬಹುದಾದ ಕಾಲದಲ್ಲಿ ಶಿಕ್ಷಕರಿಗೇನು ಕೆಲಸ? ಬಹುಶಃ, ಹೊಸ ಕೆಲಸವೇನೂ ಇಲ್ಲ. ಇದ್ದರೆ ಅದೇ ಕೆಲಸ– ಮನುಷ್ಯ ಸಂಬಂಧಗಳನ್ನು ಉಳಿಸುವ ಕೆಲಸ. ಕೃತಕ ಬುದ್ಧಿಮತ್ತೆಯ ಕಾಲದಲ್ಲೂ ಜಗತ್ತು ಹಿಡಿ ಪ್ರೀತಿಗಾಗಿ, ಎದುರಿರುವ ಮನುಷ್ಯನ ಕಣ್ಣಿಂದ ಪ್ರತಿಫಲಿಸುವ ಕರುಣೆಗಾಗಿ ಹಂಬಲಿಸುವುದು ನಿಲ್ಲದು. ಗಂಡಿನ ಸ್ಪರ್ಶವು ಹೆಣ್ಣನ್ನೂ, ಹೆಣ್ಣಿನ ಕಿರುನಗೆ ಗಂಡನ್ನೂ ರೋಮಾಂಚನಗೊಳಿಸದೇ ಇರದು. ಪ್ರಪಾತದ ನಡುವೆ ಹುಲ್ಲುಕಡ್ಡಿಯೊಂದನ್ನು ಹಿಡಿದು ಬದುಕಿಗಾಗಿ ಹೆಣಗುವ ಜೀವದ ದನಿ ಇನ್ನೊಂದು ಜೀವಕ್ಕಲ್ಲದೆ ಯಂತ್ರಕ್ಕೆ ಕೇಳಿಸಬಲ್ಲದೆ?

ಆ ಕಾಲದ ಶ್ರೇಷ್ಠ ಶಿಕ್ಷಕ ಸರ್ವಪಳ್ಳಿ ರಾಧಾಕೃಷ್ಣನ್ ರವರನ್ನು ಮೈಸೂರಿನಿಂದ ಬೀಳ್ಕೊಡುವಾಗ ಅವರ ಶಿಷ್ಯಂದಿರು ಸಾರೋಟನ್ನು ತಾವೇ ಎಳೆದುಕೊಂಡು ಹೋಗಿದ್ದರು ಎಂಬುದು ಆ ಕಾಲಕ್ಕೆ ಮುಗಿಯಿತು. ಗುರುವೆಂಬುದು ಅಹಂಕಾರವಾಗಿ ನಮ್ಮ ಅಸ್ತಿತ್ವದೊಳಗೇ ಬೇರೂರಿದ್ದರೆ ಅದನ್ನು ಕಿತ್ತೊಗೆಯುವುದು ಸದ್ಯದ ಅಗತ್ಯ.

ಕಾಲದ ಕನ್ನಡಕವನ್ನು ಆಗಾಗ ಬದಲಿಸುತ್ತಿರಬೇಕು.



**ಉದಯ ಗಾಂವಕಾರ**
udayagaonkar@gmail.com
ವಾಟ್ಸಾಪ್: 9481509699

ಸಂಪುಟ: 24 । ಸಂಚಿಕೆ: 09 । ಸೆಪ್ಟೆಂಬರ್ 2025 । ಪುಟಗಳು: 44

# ಟೀಚರ್

ಸಲಹಾ ಮಂಡಳಿಯ ಸದಸ್ಯರು

**ಪ್ರೊ. ಎಮ್.ಎಸ್. ಶೈಲ । ಪ್ರೊ. ಎಂ.ಆರ್.ಎನ್.ಮೂರ್ತಿ**
**ಡಾ. ವಿ.ಪಿ. ನಿರಂಜನಾರಾಧ್ಯ । ನಾಗೇಶ ಹೆಗಡೆ । ಶಂಕರ ಹಲಗತ್ತಿ ।**
**ಕೊಳ್ಳೆಗಾಲ ಶರ್ಮ । ಡಾ. ವಸುಂಧರಾ ಭೂಪತಿ**
**ಬೊಳುವಾರು ಮಹಮ್ಮದ ಕುಂಞಿ**

ಗೌರವ ಸಂಪಾದಕರು
**ಜಿ. ವಿನುತ**

ಸಂಪಾದಕರು
**ಉದಯ ಗಾಂವಕಾರ**

ಸಹ ಸಂಪಾದಕರು
**ಎಫ್.ಸಿ. ಚೇಗರೆಡ್ಡಿ । ಅಹಮದ್ ಹಗರೆ**

ಸಂಪಾದಕ ಮಂಡಳಿ
**ಸತೀಶ ಕುಲಕರ್ಣಿ । ಶ್ರೀದೇವಿ ಕೆರೆಮನೆ । ಕೆ.ಎಸ್. ರವಿಕುಮಾರ್ ।**
**ಅಬ್ದುಲ್ ಲತೀಫ್ । ಹಫೀಝುಲ್ಲಾ**

ಪ್ರಕಾಶಕರು
**ಶುಭಂಕರ ಚಕ್ರವರ್ತಿ,** ಕಾರ್ಯದರ್ಶಿ
ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆ,
ಬೆಂಗಳೂರು–560 012 bgvskarnataka@gmail.com

ಮುದ್ರಕರು
**ಪ್ರಿಂಟ್ ಹಟ್,** ನಂ.4, 2ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ,
ಗೋವಿಂದರಾಜನಗರ, ಬೆಂಗಳೂರು–40

ಮುಖಪುಟ
**ಉದಯ ಗಾಂವಕಾರ**

ರಕ್ಷಾಪುಟ ವಿನ್ಯಾಸ
**ಉದಯ ಗಾಂವಕಾರ**

ಒಳಪುಟ ಚಿತ್ರಗಳು:
**ನಂಜುಂಡಸ್ವಾಮಿ ಮತ್ತು**
**ಉದಯ ಗಾಂವಕಾರ**

ಪುಟ ವಿನ್ಯಾಸ
**ರಾಮು. ಎಂ., ಕ್ರಿಯಾ**

ಸಂಪರ್ಕ
**ಸಂಪಾದಕರು,**
**'ಟೀಚರ್' ಪತ್ರಿಕೆ**
ಭಾರತ ಜ್ಞಾನ ವಿಜ್ಞಾನ
ಸಮಿತಿ, 2ನೇ ಮಹಡಿ, ಹಳೇ
ಕೆಮಿಕಲ್ ಇಂಜಿನಿಯರಿಂಗ್
ಕಟ್ಟಡ,
ಭಾರತೀಯ ವಿಜ್ಞಾನ ಸಂಸ್ಥೆ,
ಬೆಂಗಳೂರು–560 012
e-mail:
teacherpatrike@gmail.com




## ಈ ಸಂಚಿಕೆ

**ಎದೆಯದನಿಗೂ ಮಿಗಿಲಾದ ಶಾಸ್ತ್ರವಿದೆಯೇ?**
ವೇದಾ ಆಠವಳೆ, ಬೆಂಗಳೂರು — 3

**ಹರೆಯದ ಹುಡುಗಿ ಹೀಗೇಕೆ?**
ಡಾ. ಎಚ್.ಎಸ್.ಅನುಪಮಾ
ನಿರೂಪಣೆ: ಸುಶೀಲಾ ಕೆಂಚನೂರು — 5

**ಲವ್ ಯೂ.....**
ಗುಂಡೂರಾವ್ ದೇಸಾಯಿ, ಮಸ್ಕಿ — 7

**ಆತ್ಮಹತ್ಯೆಗಳನ್ನು ತಡೆಯಬಹುದು!**
ಡಾ. ಪಿ.ವಿ. ಭಂಡಾರಿ — 9

**ಮಸ್ಜಿದುನ್ನಬವಿಯ ಸಿಂಹಾಸನ**
ಮುಸ್ತಾಕ್ ಹೆನ್ನಾಬೈಲು — 11

**ನಮ್ಮ ಶಾಲೆಗಳಲ್ಲಿ ಮುಖ ಗುರುತಿಸುವಿಕೆ ತಂತ್ರಜ್ಞಾನ ಅಗತ್ಯವೇ?**
ಅನುಷಾ ಶರ್ಮ — 13

**ಸಮಯಸಾಧಕರಾಗೋಣ!**
ಶ್ವೇತಾ ಕೆ ಕೊಟಗಿ — 15

ಪಾಷಾಂಕಣ
**ದೃಶ್ಯಕಾವ್ಯ : ಸನ್ನೆ ನುಡಿ**
ಪ್ರೊ. ಅಬ್ದುಲ್‌ರೆಹಮಾನ್ ಪಾಷಾ — 17

**ಸನ್ನೆ ಭಾಷೆಯ ಭಿನ್ನ ವ್ಯಾಕರಣ**
ರವಿ. ಆರ್ — 19

**ಗ್ರಹಣ ಕಾಲದ ಪ್ರಶ್ನೆಗಳು**
ಕಮಲ್ ಲೋಡಾಯ — 21

**ಭವಿಷ್ಯದ ಇಂಟರ್‌ನೆಟ್**
ರಾಜು ಭೂಶೆಟ್ಟಿ ಹುಬ್ಬಳ್ಳಿ — 23

**ಜಗದ ಮೊದಲ ಕವಿಯ ಮೊದಲ ಯುದ್ಧ ವಿರೋಧಿ ಕವಿತೆ**
ಕೆ.ಎಸ್.ರವಿಕುಮಾರ್, ಹಾಸನ — 24

**ಹೊಸಚಿಗುರು, ಹಳೆಬೇರು – ಮರವನಪ್ಪಿದ ಬಳ್ಳಿ ಯಾರು?**
ಕ್ಷಮಾ ವಿ ಭಾನುಪ್ರಕಾಶ್ — 26

**ಪದಬಂಧ**
ವಿದ್ಯಾ ಹಾಲಬಾವಿ — 28

**ಇನ್ನೊಂದು ಹಡಗಿನ ಪಯಣಿಗರು**
ಶೈಲಾ ಶಂಕರ ಬಡಿಗೇರ
ಸಚಿನ್‌ಕುಮಾರ್ ಹಿರೇಮಠ್
ರವೀಂದ್ರ ರುದ್ರವಾಡಿ
ಸೋಮು ಕುದರಿಹಾಳ — 29

**ಬಂಜರಾಗುತ್ತಿರುವ ಮಂಜು ಹೊಳೆಗಳು**
ಕೆ.ಎಸ್.ರವಿಕುಮಾರ್ — 33


**ಉಸಿರು**
ಡಾ. ಶ್ರೀದೇವಿ ಕರ್ಜಗಿ — 37

**ಪಟ್ಟೆತಲೆ ಹೆಬ್ಬಾತುಗಳು: ಬಲು ದೂರದ ಅತಿಥಿಗಳು!**
ಛಾಯಚಿತ್ರಗಳು ಮತ್ತು ಬರಹ
ಈರಣ್ಣ ಬೆಂಗಾಲಿ ರಾಯಚೂರು — 40



# ನಮ್ಮ ಶಾಲೆಗಳಲ್ಲಿ ಮುಖ ಗುರುತಿಸುವಿಕೆ ತಂತ್ರಜ್ಞಾನ ಅಗತ್ಯವೇ?

**ಸಮಸ್ಯೆಯೊಂದಕ್ಕೆ ತಂತ್ರಜ್ಞಾನದ ಪರಿಹಾರ ಹುಡುಕುವ ಮೊದಲು ಸಾಕಷ್ಟು ಯೋಚನೆ ಮಾಡಬೇಕು ಎಂಬುದು ಈ ಹಿಂದಿನ ಅನುಭವಗಳಿಂದ ಕಲಿತ ಪಾಠ. ಅದರರ್ಥ, ತಂತ್ರಜ್ಞಾನ ಕೆಟ್ಟದು ಎಂದಲ್ಲ. ಹೊಸದನ್ನು, ಅದರಲ್ಲೂ ಮಾನವೀಯ ಸಂವೇದನೆಯಿಲ್ಲದ ವಿಧಾನವನ್ನು ಬಳಸುವ ಮೊದಲು ಚರ್ಚೆ ಅಗತ್ಯ. ಐ.ಟಿ ಫಾರ್ ಚೇಂಜ್ ಸಂಸ್ಥೆ ನಡೆಸುವ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ತರಬೇತಿಯಲ್ಲಿ ತೊಡಗಿಸಿಕೊಂಡಿರುವ ಅನುಷಾ ಶರ್ಮಾ ಈ ದಿಕ್ಕಿನಲ್ಲಿ ಯೋಚಿಸುವಂತೆ ಈ ಬರೆಹದ ಮೂಲಕ ಆಗ್ರಹಪಡಿಸುತ್ತಾರೆ. ಅವರು ಗಣಿತ, ಭಾಷೆ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಸಂಪನ್ಮೂಲಗಳನ್ನು ರಚಿಸುವಲ್ಲಿ, ಕಲಿಕೆಯ ವಿಧಾನಗಳನ್ನು ರೂಪಿಸುವಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ.**



ಅನುಷಾ ಶರ್ಮಾ

ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ಇತ್ತೀಚೆಗೆ ಕೃತಕ ಬುದ್ಧಿಮತ್ತೆಯನ್ನು ಆಧರಿಸಿದ (ಎ.ಐ) ಹಾಗು ಮೊಬೈಲ್ ಆಧಾರಿತ ಮುಖ ಗುರುತಿಸುವಿಕೆ ವ್ಯವಸ್ಥೆಯೊಂದನ್ನು (ಫೇಸ್ ರಿಕಗ್ನಿಷನ್ ವ್ಯವಸ್ಥೆ) ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಜಾರಿಗೆ ತರುವುದಾಗಿ ಘೋಷಿಸಿದೆ. ಈ ವ್ಯವಸ್ಥೆಯು ಈಗಾಗಲೇ ಬಳಸಲಾಗುತ್ತಿರುವ ಎಸ್.ಎ.ಟಿ.ಎಸ್ ಗೆ ಜೋಡಣೆಯಾಗಿದ್ದು, ಶಾಲೆಗಳಲ್ಲಿ ಹಾಜರಾತಿ, ಹಾಗು, ಬಿಸಿ ಊಟದಂತಹ ಇತರ ಸರ್ಕಾರೀ ಯೋಜನೆಗಳ ಫಲಾನುಭವಿಗಳ ಸರಿಯಾದ ಮಾಹಿತಿ ಸಂಗ್ರಹಿಸುವ ಉದ್ದೇಶದೊಂದಿಗೆ ಇದೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನಗೊಳ್ಳಲಿದೆ.

ಮೇಲ್ನೋಟಕ್ಕೆ ಇದು ದಕ್ಷತೆ ಹಾಗು ಹೊಣೆಗಾರಿಕೆ ಹೆಚ್ಚಿಸುವತ್ತ ತೆಗೆದುಕೊಂಡಿರುವ ಒಂದು ಹೆಜ್ಜೆಯಾಗಿ ಕಾಣಬಹುದಾದರೂ, ಕೂಲಂಕುಶವಾಗಿ ವಿಶ್ಲೇಷಿಸಿದಾಗ, ಭದ್ರತೆ, ಗೌಪ್ಯತೆ ಹಾಗು ಶಿಕ್ಷಣದಲ್ಲಿ ತಂತ್ರಜ್ಞಾನದ ಪಾತ್ರದ ಕುರಿತು ಹಲವು ಗಂಭೀರ ಪ್ರಶ್ನೆಗಳು ಮೂಡಿಬರುತ್ತವೆ. ಯಾವುದೇ ಹೊಸ ತಂತ್ರಜ್ಞಾನವನ್ನು ಜಾರಿಗೆ ತರುವ ಮೊದಲು, ಅದರ ಲಾಭ–ನಷ್ಟಗಳ ಸಮೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸುವುದು ಅತ್ಯವಶ್ಯಕ.

**ಭರವಸೆಯ ಹಿಂದಿರುವ ಅಪಾಯಗಳು**

ಸುಲಭವಾಗಿ ದುರುಪಯೋಗಗೊಳ್ಳುವ ಒಂದು ತಂತ್ರಜ್ಞಾನವಾದ ಮುಖ ಗುರುತು ವ್ಯವಸ್ಥೆಯ (ಎಫ್.ಆರ್.ಎಸ್) ಬಳಕೆಯನ್ನು ಜಗತ್ತಿನ ಅನೇಕ ದೇಶಗಳಲ್ಲಿ ನಿಷೇಧಿಸಲಾಗಿದೆ. ಭಾರತದಲ್ಲಿ ದತ್ತಾಂಶ ರಕ್ಷಣೆ ವ್ಯವಸ್ಥೆಗಳು ದುರ್ಬಲವಾಗಿರುವುದರಿಂದ ಅಪಾಯಗಳು ಇನ್ನೂ ಹೆಚ್ಚು. ಸಂಗ್ರಹವಾದ ದತ್ತಾಂಶ, ಸೋರಿಕೆ, ಮಾರಾಟ ಅಥವಾ ಕಳವುಗೊಳ್ಳುವ ಸಾಧ್ಯತೆ ಅಧಿಕವಾಗಿರುತ್ತದೆ– ಇದರಿಂದ ವಿದ್ಯಾರ್ಥಿಗಳು ಮಾತ್ರವಲ್ಲ, ಶಿಕ್ಷಕರೂ ಅಪಾಯಕ್ಕೆ ಒಳಗಾಗಬಹುದು.

ಹಲವಾರು ಬಾರಿ ಸಾರ್ವಜನಿಕ ಸಂಸ್ಥೆಗಳು ಸಂಗ್ರಹಿಸಿದ ವೈಯಕ್ತಿಕ ಮಾಹಿತಿಗಳು ವಿಶ್ವಾಸಾರ್ಹರಲ್ಲದ ವ್ಯಕ್ತಿಗಳಿಗೆ ಕೈಸೇರಿ ಮಾನಹಾನಿ ಮತ್ತು ನಷ್ಟ ಉಂಟಾಗಿರುವ ಹಲವಾರು ಸನ್ನಿವೇಶಗಳು ಸಂಭವಿಸಿವೆ. ಸಿಸಿಟಿವಿ ದೃಶ್ಯಗಳು ಸಾರ್ವಜನಿಕಗೊಂಡ ಘಟನೆಗಳು ಹಾಗು ಸರಕಾರ ಬೆಂಬಲಿತ ಡಿಜಿ ಯಾತ್ರಾ ಆಪ್‌ನ ದತ್ತಾಂಶ ಉಲ್ಲಂಘನೆ ಪ್ರಕರಣಗಳು ಕೆಲವು ಉದಾಹರಣೆಗಳಷ್ಟೇ. ಮಕ್ಕಳ ಅತೀ ಸಂವೇದನಶೀಲ ಮಾಹಿತಿಗಳಲ್ಲೊಂದಾದ ಬಯೋಮೆಟ್ರಿಕ್

ದತ್ತಾಂಶವನ್ನು ಈ ಮಟ್ಟದಲ್ಲಿ ಸಂಗ್ರಹಿಸಿದಾಗ, ಅದರ ಸುರಕ್ಷತೆ ಬಗ್ಗೆ ಗಂಭೀರ ಅನುಮಾನಗಳು ಏಳುವುದು ಸಹಜ. ಹತ್ತನೆಯ ತರಗತಿಯ ಪರೀಕ್ಷಾ ಫಲಿತಾಂಶದ ದತ್ತಾಂಶವು ಖಾಸಗಿ ಸಂಸ್ಥೆಗಳ ಕೈಸೇರಿ ಅದನ್ನು ಅವರು ತಮ್ಮ ಲಾಭಕ್ಕಾಗಿ ಬಳಸುತ್ತಿರುವುದು ಸಹ ಮಾರುಕಟ್ಟೆಯಲ್ಲಿ ಲಾಭಾಂಶಗಳಿಗೆ ಬಳಸುತ್ತಿರುವುದನ್ನು ನಾವು ನೋಡುತ್ತಲೇ ಇದ್ದೇವೆ. ಮುಖ ಗುರುತಿಸುವಿಕೆ ದತ್ತಾಂಶ ಅವಿಶ್ವಾಸಾರ್ಹ ವ್ಯಕ್ತಿಗಳಿಗೆ ಸಿಕ್ಕರೆ, ಅದು ಮಾನವ ಸಾಗಣೆದಾರರು, ಸೈಬರ್ ಅಪರಾಧಿಗಳು ಅಥವಾ ಲೈಂಗಿಕ ಹಿಂಸಾಚಾರಿಗಳಿಗೆ ವರದಾನವಾಗಬಹುದು. ಇದರ ಜೊತೆಗೆ, ಕೃತಕ ಬುದ್ಧಿಮತ್ತೆ ಆಧಾರಿತ ಡೀಪ್‌ಫೇಕ್, ಇಮೇಜ್ ಮಾರ್ಫಿಂಗ್ ಮತ್ತು ಸೆಕ್ಸ್‌ಟೋರ್ಷನ್ ಪ್ರಕರಣಗಳು ಹೆಚ್ಚಾಗುತ್ತಿವೆ. ಅಂತರ್ರಾಷ್ಟ್ರೀಯ ವರದಿಗಳು ಡಿಜಿಟಲ್ ತಂತ್ರಜ್ಞಾನದ ದುರುಪಯೋಗದಿಂದ ಮಕ್ಕಳು ಬೆದರಿಕೆ, ಶೋಷಣೆ ಮತ್ತು ಆತ್ಮಹತ್ಯೆಯಂತಹ ಘೋರ ಪರಿಣಾಮಗಳಿಗೆ ಒಳಗಾಗುತ್ತಿರುವುದನ್ನು ತೋರಿಸುತ್ತವೆ.

**ಮಕ್ಕಳಿಗೆ ಸುರಕ್ಷಿತ ಸ್ಥಳಗಳ ಅಗತ್ಯತೆ**

ಶಾಲೆಗಳು ಮಕ್ಕಳಿಗೆ ಸುರಕ್ಷಿತ ಸ್ಥಳವಾಗಿರಬೇಕಾಗಿದ್ದು, ಅಲ್ಲಿ ಅವರು ಕಲಿಯಲು, ತಮ್ಮನ್ನು ತಾವು ಅಭಿವ್ಯಕ್ತಿಸಲು ಮುಕ್ತ ವಾತಾವರಣವಿರಬೇಕು. ಆದರೆ FRS ಮೂಲಕ ದಿನನಿತ್ಯದ ನಿಗಾವಾಹಿ ತರಗತಿಯಲ್ಲಿ ಪ್ರತಿಯೊಂದು ಚಲನವಲನವನ್ನು ದಾಖಲಿಸುವ ಪರಿಸ್ಥಿತಿ ಉಂಟುಮಾಡುತ್ತದೆ. ತರಗತಿಯಲ್ಲಿ ಮಕ್ಕಳ ಸಹಜ ಚಟುವಟಿಕೆಗಳನ್ನು ಚಿತ್ರೀಕರಿಸಿದರೆ, ಅದು ಹೊರಗಿನ ಜಗತ್ತಿನಲ್ಲಿ ಬೆದರಿಕೆ ಹಾಕಲು ಅಥವಾ ವಂಚನೆಗೆ ಒಳಪಡಿಸಲು ಬಳಸಲ್ಪಡುವ ಜಾಲವಾಗುವ ಅಪಾಯವಿದೆ. ಶಿಕ್ಷಕರೂ ಈ ಅಪಾಯದಿಂದ ದೂರವುಳಿಯುವುದು ಕಠಿಣವಾಗಿದೆ. ವಯಸ್ಕರೂ ಸಹ ಚಿತ್ರಗಳನ್ನು ಮಾರ್ಪಡಿಸುವ (ಇಮೇಜ್ ಮಾರ್ಫಿಂಗ್) ಮತ್ತು ಲೈಂಗಿಕ ಬೆದರಿಕೆಗೆ (ಸೆಕ್ಸ್‌ಟೋರ್ಷನ್) ಬಲಿಯಾಗಿರುವ ಉದಾಹರಣೆಗಳಿವೆ. ಹೀಗಾಗಿ ಎಫ್.ಆರ್.ಎಸ್ ಜಾರಿಗೊಳಿಸುವುದರಿಂದ ಶಿಕ್ಷಕರೂ ಅಪಾಯಕ್ಕೊಳಗಾಗಬಹುದು ಮತ್ತು ಶೈಕ್ಷಣಿಕ ಪರಿಸರ ಹದಗೆಡಬಹುದು.

**ಜಾಗತಿಕ ಎಚ್ಚರಿಕೆಗಳು**

ಎಫ್.ಆರ್.ಎಸ್ ಕುರಿತು ಕಾಳಜಿ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. ಸಂಯುಕ್ತ ರಾಷ್ಟ್ರಗಳ ಶಿಕ್ಷಣ ಹಕ್ಕುಗಳ ವಿಶೇಷ ಪ್ರತಿನಿಧಿ, ಶಾಲೆಗಳಲ್ಲಿ ಇಂತಹ ತಂತ್ರಜ್ಞಾನಗಳನ್ನು ನಿಷೇಧಿಸಬೇಕೆಂಬ ಸ್ಪಷ್ಟ ಶಿಫಾರಸ್ಸು ನೀಡಿದ್ದಾರೆ. ಎ.ಐ ತಂತ್ರಜ್ಞಾನದ ಮುಂಚೂಣಿಯಲ್ಲಿರುವ ಚೀನಾ ಮತ್ತು ಅಮೆರಿಕಾದಂತಹ ದೇಶಗಳೂ ಸಹ ಶಾಲೆಗಳಲ್ಲಿ ಮುಖ ಗುರುತಿಸುವಿಕೆ ಬಳಕೆಯನ್ನು ಹಿಂತೆಗೆದುಕೊಳ್ಳುತ್ತಿವೆ ಅಥವಾ ನಿಯಂತ್ರಿಸುತ್ತಿವೆ.

**ತಂತ್ರಜ್ಞಾನಕ್ಕಿಂತ ಮೀರಿ ಹೊಣೆಗಾರಿಕೆ**

ಎಫ್.ಆರ್.ಎಸ್ ಹೇರಿಕೆಯ ಹಿಂದೆ ಶಾಲೆಗಳಲ್ಲಿ ಹೆಚ್ಚಿನ ಹೊಣೆಗಾರಿಕೆ ತರಬೇಕೆಂಬ ಉದ್ದೇಶವಿದೆ. ಆದರೆ ತಂತ್ರಜ್ಞಾನ ಆಧಾರಿತ "ತ್ವರಿತ ಪರಿಹಾರಗಳು" ಹೊಣೆಗಾರಿಕೆಯ ಭ್ರಮೆ ಸೃಷ್ಟಿಸುತ್ತವೆಯೇ ಹೊರತು ನಿಜವಾದ ಹೊಣೆಗಾರಿಕೆಯನ್ನಲ್ಲ. ಶಿಕ್ಷಣದಲ್ಲಿ ಸರಿಯಾದ ಹೊಣೆಗಾರಿಕೆ ಬರಲು ಶಾಲೆ, ಶಿಕ್ಷಕರು ಮತ್ತು ಸಮುದಾಯಗಳ ನಡುವಿನ ಸಂಬಂಧ ಬಲಪಡಿಸಬೇಕು. ಈಗಾಗಲೇ ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಗಳು (ಎಸ್.ಡಿ.ಎಮ್.ಸಿ) ಅಸ್ತಿತ್ವದಲ್ಲಿವೆ. ಅವುಗಳನ್ನು ಶಕ್ತಗೊಳಿಸಿದರೆ ಡಿಜಿಟಲ್ ನಿಗಾವಾಹಿ ವ್ಯವಸ್ಥೆಗಿಂತ ಪರಿಣಾಮಕಾರಿ ಸ್ಥಳೀಯ ಹೊಣೆಗಾರಿಕೆ ನಿರ್ಮಾಣವಾಗಬಹುದು. ಶಿಕ್ಷಕರು ಮತ್ತು ಪೋಷಕರ ಸಾಮರ್ಥ್ಯವರ್ಧನೆಗೆ ಹೂಡಿಕೆ ಮಾಡಿದರೆ, ಅದು ಹೊಣೆಗಾರಿಕೆಯನ್ನು ಹೆಚ್ಚಿಸುವುದರ ಜೊತೆಗೆ ಶಾಲೆ–ಸಮುದಾಯದ ಸಹಭಾಗಿತ್ವವನ್ನು ಬಲಪಡಿಸುತ್ತದೆ. ಇದನ್ನು ಯಾವ ಆಲ್ಗಾರಿದಮ್ಮಿಂದಲೂ ಪ್ರತಿಸ್ಥಾಪಿಸಲಾಗುವುದಿಲ್ಲ.

**ಎಡ್ಟೆಕ್‌ನಲ್ಲಿ ಮುನ್ನೆಚ್ಚರಿಕೆ ಅಗತ್ಯ**

ಶಿಕ್ಷಣದಲ್ಲಿ ಡಿಜಿಟಲ್ ಪರಿಹಾರಗಳ ಆಕರ್ಷಣೆಯ ನಡುವೆ, ಅವು ಹೊತ್ತಿರುವ ಅಪಾಯಗಳನ್ನು ಬಹಳಷ್ಟು ಕಡೆಗಣಿಸಲಾಗುತ್ತಿದೆ. ಎಫ್.ಆರ್.ಎಸ್ ನಂತಹ ತಂತ್ರಜ್ಞಾನವನ್ನು ಜಾರಿಗೊಳಿಸುವ ಮೊದಲು, ನೀತಿನಿರ್ಧಾರಕರು ವೆಚ್ಚ, ಅಪಾಯ ಮತ್ತು ದೀರ್ಘಕಾಲೀನ ಪರಿಣಾಮಗಳನ್ನು ಸೂಕ್ಷ್ಮವಾಗಿ ಅಳೆಯಬೇಕು.

**ಕೇಳಬೇಕಾದ ಕೆಲವು ಪ್ರಶ್ನೆಗಳು**

- ಈ ತಂತ್ರಜ್ಞಾನವನ್ನು ದೀರ್ಘಾವಧಿಗೆ ಪ್ರಯೋಗಾತ್ಮಕವಾಗಿ ಬಳಸಿಕೊಂಡು, ಅಡಗಿರುವ ಅಪಾಯಗಳನ್ನು ಗುರುತಿಸಿರುವರೇ?
- ದುರುಪಯೋಗ, ಮಾರಾಟಗಾರರ ಅವಲಂಬನೆ ಅಥವಾ ವ್ಯವಸ್ಥೆಯ ವೈಫಲ್ಯವನ್ನು ತಡೆಯಲು ಪರಿಣಾಮಕಾರಿ ಭದ್ರತಾ ಕ್ರಮಗಳಿವೆಯೇ?
- ಇದನ್ನು ಎಲ್ಲಾ ಶಾಲೆಗಳಿಗೂ ಸಮಾನವಾಗಿ ಹಾಗೂ ದೀರ್ಘಕಾಲಿಕವಾಗಿ ಜಾರಿಗೊಳಿಸುವುದು ಸಾಧ್ಯವೇ?

ಭಾರತ ಸರ್ಕಾರ ಪ್ರೋತ್ಸಾಹಿಸುತ್ತಿರುವ ಡಿಜಿಟಲ್ ಪಬ್ಲಿಕ್ ಇನ್‌ಫ್ರಾಸ್ಟ್ರಕ್ಚರ್ (ಡಿ.ಪಿ.ಐ) ಮತ್ತು ಮುಕ್ತ ಮೂಲ ಸೋಫ್ಟ್‌ವೇರ್(ಫೊಸ್) ದಾರಿ ತೋರಿಸುವಂತಿವೆ. ಇವು ಸಾರ್ವಜನಿಕ ಸ್ವಾಮ್ಯದಲ್ಲಿರುವ, ಪಾರದರ್ಶಕ ಹಾಗೂ ಹೊಣೆಗಾರಿಕೆಯ ವ್ಯವಸ್ಥೆಗಳನ್ನು ಒದಗಿಸುತ್ತವೆ. ಆದರೆ ಖಾಸಗಿ ಕಂಪನಿಗಳ ಹಿಡಿತದಲ್ಲಿರುವ ತಂತ್ರಜ್ಞಾನಗಳು, ಶಾಲೆಗಳನ್ನು ಆರ್ಥಿಕ ನಷ್ಟಕ್ಕೂ, ದುರುಪಯೋಗಕ್ಕೂ ಒಳಪಡಿಸುವ ಅಪಾಯವನ್ನು ಉಂಟುಮಾಡಬಹುದು.

**ಶಿಕ್ಷಣದಲ್ಲಿ ತಂತ್ರಜ್ಞಾನದ ಪಾತ್ರವನ್ನು ಮರುಪರಿಶೀಲಿಸಬೇಕು**

ಮುಖ ಗುರುತಿಸುವಿಕೆ ವ್ಯವಸ್ಥೆಗಳು ದಕ್ಷತೆಯ ಭರವಸೆಯನ್ನು ನೀಡಬಹುದಾದರೂ, ಅವುಗಳಲ್ಲಿ ಅಡಗಿರುವ ಅಪಾಯಗಳು ಅಪಾರವಾಗಿವೆ. ನಮ್ಮ ಸಮಾಜದ ಅತೀ ಸಂವೇದನಶೀಲ ಗುಂಪಾದ ಮಕ್ಕಳ ಕಾಳಜಿಯನ್ನು ನಾವು ಪರಿಗಣಿಸಲೇಬೇಕು. ಶಿಕ್ಷಕರೂ ಸಹ ಈ ರೀತಿಯ ಸಾಧನಗಳು ತರಗತಿಗಳಲ್ಲಿ ಸ್ಥಾನ ಪಡೆಯಬೇಕೇ ಎಂಬುದನ್ನು ತಮ್ಮ ತಮ್ಮ ವೇದಿಕೆಗಳಲ್ಲಿ ಚರ್ಚಿಸಬೇಕು.

ಶಿಕ್ಷಣವು ವಿಶ್ವಾಸ, ಸುರಕ್ಷತೆ ಮತ್ತು ಮಾನವೀಯ ಸಂಪರ್ಕಗಳ ಮೇಲೆ ಬೆಳೆಯುತ್ತದೆ. ಹೊಣೆಗಾರಿಕೆಯನ್ನು ಕೃತಕ ಬುದ್ಧಿಮತ್ತೆಯ ಕೈಗೆ ಒಪ್ಪಿಸುವ ಬದಲಿಗೆ, ಶಾಲೆಗಳಿಗೆ ಬೆಂಬಲವಾಗಿರುವ ಸಾಮಾಜ ಮತ್ತು ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ನಮ್ಮ ಮಕ್ಕಳ ಗೌರವ, ಗೌಪ್ಯತೆ ಮತ್ತು ಸುರಕ್ಷತೆ ನಮ್ಮ ಅತಿ ಮುಖ್ಯ ಆದ್ಯತೆಯಾಗಿರಬೇಕು.

